DFA/886593

**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಮಾನ್ಯ ವಿಧಾನ ಪರಿಷತ್ತು ಸದಸ್ಯರ ಹೆಸರು: | ಶ್ರೀ ಆರ್.ಬಿ.ತಿಮ್ಮಾಪುರ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: | **370(2757)** |
| ಉತ್ತರಿಸಬೇಕಾದ ದಿನಾಂಕ: | **28-03-2022** |
| ಉತ್ತರಿಸುವ ಸಚಿವರು: | ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಎಷ್ಟು ವಿದ್ಯಾರ್ಥಿಗಳು ತಮ್ಮ ವೈದ್ಯಕೀಯ ಶಿಕ್ಷಣವನ್ನು ಉಕ್ರೇನ್, ರಷ್ಯಾ ಮತ್ತು ಇವುಗಳ ಅಕ್ಕಪಕ್ಕದ ರಾಷ್ಟ್ರಗಳು ಸೇರಿದಂತೆ ಇತರ ದೇಶಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ? | **ರಾಜ್ಯದ ಎಷ್ಟು ವಿದ್ಯಾರ್ಥಿಗಳು ತಮ್ಮ ವೈದ್ಯಕೀಯ ಶಿಕ್ಷಣವನ್ನು ಉಕ್ರೇನ್, ರಷ್ಯಾ ಮತ್ತು ಇವುಗಳ ಅಕ್ಕಪಕ್ಕದ ರಾಷ್ಟ್ರಗಳು ಸೇರಿದಂತೆ ಇತರ ದೇಶಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ ಎಂಬ ಮಾಹಿತಿಯು ಕೇಂದ್ರ ಸರ್ಕಾರದ ಹಂತದಲ್ಲಿರುತ್ತದೆ. ಮುಂದುವರೆದು, ಈಗ ಸುಮಾರು** 633 **ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕರ್ನಾಟಕ ರಾಜ್ಯಕ್ಕೆ ಹಿಂದಿರುಗಿರುತ್ತಾರೆ (ಮೊದಲ ವರ್ಷದಿಂದ ಆರಂಭವಾಗಿ ಅಂತಿಮ ವರ್ಷದ ಎಂ.ಬಿ.ಬಿ.ಎಸ್. ಓದುತ್ತಿರುವ ವಿದ್ಯಾರ್ಥಿಗಳು). ಈ ವಿಷಯದ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಯವರು ಹಾಗೂ** ವೈದ್ಯಕೀಯ ಶಿಕ್ಷಣ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ಸಚಿವರು **ಚರ್ಚಿಸಿದ್ದು, ಮುಂದಿನ ದಿನಗಳಲ್ಲಿ ಉಕ್ರೇನ್ ದೇಶದಿಂದ ಮರಳಿ ಬಂದ ವಿದ್ಯಾರ್ಥಿಗಳಿಗೆ ಸೂಕ್ತವಾದ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಮುಂದಾಗಿದೆ.** |
| ಆ) | **ಆ ದೇಶಗಳಲ್ಲಿ ವೈದ್ಯಕೀಯ ಶಿಕ್ಷಣ ಪೂರ್ಣಗೊಳಿಸಲು ಅಲ್ಲಿನ ಕಾಲೇಜುಗಳು ವಿಧಿಸುತ್ತಿರುವ ವೈದ್ಯಕೀಯ ವೆಚ್ಚದ ಮೊಬಲಗೆಷ್ಟು? (ದೇಶವಾರು ವೆಚ್ಚದ ವಿವರ ನೀಡುವುದು)** | **ಉಕ್ರೇನ್ ರಷ್ಯಾ ಹಾಗೂ ಇನ್ನಿತರ ದೇಶಗಳಲ್ಲಿ ವೈದ್ಯಕೀಯ ಶಿಕ್ಷಣ ಪೂರ್ಣಗೊಳಿಸಲು ಅಲ್ಲಿನ ಕಾಲೇಜುಗಳು ವಿಧಿಸುತ್ತಿರುವ ವೈದ್ಯಕೀಯ ವೆಚ್ಚದ ಮೊಬಲಗಿನ ಮಾಹಿತಿ ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿರುವುದಿಲ್ಲ.** |
| ಇ) | **ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣಕ್ಕಾಗಿ ಯಾವ ಯಾವ ಕಾಲೇಜುಗಳು ಎಷ್ಟೆಷ್ಟು ಶುಲ್ಕವನ್ನು ಪಡೆಯುತ್ತಿವೆ? (ಕಾಲೇಜುವಾರು ಮಾಹಿತಿಯನ್ನು ನೀಡುವುದು)** | ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣಕ್ಕಾಗಿ ಯಾವ ಯಾವ ಕಾಲೇಜುಗಳು ಎಷ್ಟೆಷ್ಟು ಶುಲ್ಕವನ್ನು ಪಡೆಯುತ್ತಿವೆ ಎಂಬುದರ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಈ) | **ವೈದ್ಯಕೀಯ ಶಿಕ್ಷಣದ ದುಬಾರಿ ವೆಚ್ಚವನ್ನು ತಪ್ಪಿಸಲು ಹಾಗೂ ಇತರೆ ದೇಶಗಳಲ್ಲಿರುವಂತೆ ನಮ್ಮ ದೇಶದಲ್ಲೂ** | ಕರ್ನಾಟಕ ರಾಜ್ಯದಲ್ಲಿ ತುಂಬಾ ವರ್ಷಗಳಿಂದ ಎಂಬಿಬಿಎಸ್ ಶುಲ್ಕವು ರೂ.16,700/-ಗಳಿದ್ದು, ಪ್ರಸ್ತುತ ರೂ.55,000/-ಗಳಾಗಿರುತ್ತದೆ. ಈಗ ಸುಮಾರು 2, 3 ವರ್ಷಗಳಿಂದ ಶುಲ್ಕ |



Generated from eOffice by DR K SUDHAKAR, MED-MIN(SK), MINISTER, MEDICAL EDUCATION SEC on 12/09/2022 07:47 PM

A/886593

| | | |
|---|---|---|
| | **ಕಡಿಮೆ ಶುಲ್ಕವನ್ನು ವಿಧಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?** | ಹೆಚ್ಚಳ ಮಾಡಿರುವುದಿಲ್ಲ ಹಾಗಾಗಿ ಕರ್ನಾಟಕ ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣವು ದುಬಾರಿಯಾಗಿರುವುದಿಲ್ಲ. ಮುಂದುವರೆದು, ಮುಂದಿನ ದಿನಗಳಲ್ಲಿ ಕೇಂದ್ರ ಸರ್ಕಾರವು ಪ್ರತಿಯೊಂದು ಜಿಲ್ಲೆಯಲ್ಲಿ ಒಂದರಂತೆ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಆ ದಿನಗಳಲ್ಲಿ ಹೆಚ್ಚಿನ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಸಿಗಲಿದೆ. |

**ಸಂಖ್ಯೆ:ಎಂಇಡಿ 45 ಆರ್‌ಜಿಯು 2022**

(ಡಾ:ಕೆ.ಸುಧಾಕರ್)

ವೈದ್ಯಕೀಯ ಶಿಕ್ಷಣ ಹಾಗೂ ಆರೋಗ್ಯ
ಮತ್ತು ಕುಟುಂಬ ಕಲ್ಯಾಣ ಇಲಾಖಾ ಸಚಿವರು



Generated from eOffice by DR K SUDHAKAR, MED-MIN(SK), MINISTER, MEDICAL EDUCATION SEC on 12/09/2022 07:47 PM